ವಿರೋಧಿಸಿ ಭಾಷಣ ಮಾಡಿದರು:

‘ಏಳು ಪ್ರಾಂತಗಳಲ್ಲಿ ರಾಜ್ಯಪಾಲರುಗಳ ನಿರಂಕುಶ ಸರ್ವಾಧಿಕಾರಿ ಆಡಳಿತ ನಡೆಯುತ್ತಿದೆ. ದೇಶಾದ್ಯಂತ ಸತ್ಯಾಗ್ರಹ ಆರಂಭಿಸಲು ಇದೊಂದೇ ಕಾರಣ ಸಾಕು. ಪರರಾಷ್ಟ್ರದ ಶೋಷಣೆ ಮಾಡಿ ಜೀವ ಬಿಗಿಹಿಡಿದುಕೊಂಡಿರುವ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕಟ್ಟಡ ಓಲಾಡತೊಡಗಿದೆ. ಬ್ರಿಟಿಷ್ ಸರ್ಕಾರ ಈ ಸಾಮ್ರಾಜ್ಯವನ್ನು ಬಹುಕಾಲ ರಕ್ಷಿಸಿಕೊಳ್ಳಲಾರದು.’

ಬ್ರಿಟಿಷ್ ಸರ್ಕಾರ ಲೋಹಿಯಾರನ್ನು ಮತ್ತೆ ಬಂಧಿಸಿತು. ಪೊಲೀಸರು ಅವರನ್ನು ಕೈಕೋಳ, ಚೈನುಗಳಲ್ಲಿ ಕೋರ್ಟಿಗೆ ಕರೆತಂದರು.

ಕೋರ್ಟಿನಲ್ಲಿ ಲೋಹಿಯಾ ಹೇಳಿಕೆ ಕೊಟ್ಟರು:

‘ಯಾರು ಆಯುಧಗಳನ್ನು ಅವಲಂಬಿಸುತ್ತಾರೋ ಅವರು ತಮ್ಮ ಹೃದಯದ ದನಿಯನ್ನು ಕೇಳಿಸಿಕೊಳ್ಳಲಾರರು. ಅಂಥವರು ತಮ್ಮ ಆಯುಧಗಳ ಗುಲಾಮರಾಗುತ್ತಾರೆ. ಅವರಲ್ಲಿ ಯಾವ ಶಕ್ತಿಯೂ ಇರುವುದಿಲ್ಲ. ನಾನು ಲಾಠಿ ಸಂಸ್ಕೃತಿಯ ವಿರೋಧಿ; ಲಾಠಿಯ ನವರೂಪವಾಗಿರುವ ಬಾಂಬ್ ಎಸೆಯುವ ವಿಮಾನಕ್ಕೂ ವಿರೋಧಿ... ಬ್ರಿಟಿಷರು ನಮಗೆ ಕೇಡು ತಂದಿದ್ದಾರೆ; ಆದರೆ ನಾನವರಿಗೆ ಕೇಡುಂಟು ಮಾಡುವುದಿಲ್ಲ. ಜಗತ್ತಿನ ಜನರನ್ನು ಗುಲಾಮಗಿರಿಗೆ ತಳ್ಳಿರುವ ವ್ಯವಸ್ಥೆಯನ್ನು ಬ್ರಿಟಿಷ್ ಜನತೆ ತನ್ನ ಹೆಗಲ ಮೇಲೆ ಹೊತ್ತುಕೊಂಡಿರುವುದನ್ನು ಕಂಡರೆ ನನಗೆ ದುಗುಡವಾಗುತ್ತದೆ.’

ಲೋಹಿಯಾಗೆ ಎರಡು ವರ್ಷ ಕಠಿಣ ಶಿಕ್ಷೆಯ ಸೆರೆಮನೆವಾಸ ವಿಧಿಸಿದ ಮ್ಯಾಜಿಸ್ಟ್ರೇಟರು ಹೇಳಿದರು: ‘ಆರೋಪಿ ಅತ್ಯಂತ ಬುದ್ಧಿವಂತನೂ, ಅಪಾರ ವಿದ್ಯಾವಂತನೂ ಆದ ಸಂಪನ್ನ ವ್ಯಕ್ತಿ. ಅತ್ಯುತ್ತಮ ಜೀವನತತ್ವಗಳನ್ನೂ ನೈತಿಕತೆಯನ್ನೂ ಉಳ್ಳ ಈತನ ಪ್ರಾಮಾಣಿಕತೆ ಮತ್ತು ಉದ್ದೇಶಗಳನ್ನು ಯಾರೂ ಪ್ರಶ್ನಿಸಲಾಗದು. ತನ್ನ ನಂಬಿಕೆಗಳಿಗಾಗಿ ನೋವನ್ನನುಭವಿಸಲು ಈತನಿಗೆ ಯಾವ ಹಿಂಜರಿಕೆಯೂ ಇಲ್ಲ; ಈತ ಶಿಕ್ಷೆಯ ಬಗೆಗಾಗಲೀ, ಶಿಕ್ಷಾವಧಿಯ ಬಗೆಗಾಗಲೀ ತಲೆ ಕೆಡಿಸಿಕೊಳ್ಳುವ ವ್ಯಕ್ತಿಯಲ್ಲ.’

ಲೋಹಿಯಾ ಬಂಧನ ಕುರಿತು ಗಾಂಧೀಜಿ ಬರೆದರು: ‘ಡಾ. ಲೋಹಿಯಾ ಮತ್ತು ಇನ್ನಿತರ ಕಾಂಗ್ರೆಸ್ಸಿಗರ ಬಂಧನಗಳು ಭಾರತವನ್ನು ಬಂಧಿಸಿರುವ ಸರಪಳಿಗಳಿಗೆ ಮೇಲಿಂದ ಮೇಲೆ ಬೀಳುತ್ತಿರುವ ಸುತ್ತಿಗೆಯ ಹೊಡೆತಗಳು!’

ಈ ಘಟ್ಟದಲ್ಲಿ ನೆಹರು ಸೇರಿದಂತೆ ಸಾವಿರಾರು ಕಾಂಗ್ರೆಸ್ ನಾಯಕರು, ಕಾರ್ಯಕರ್ತರನ್ನು ಬ್ರಿಟಿಷ್ ಸರ್ಕಾರ ಬಂಧಿಸಲಾರಂಭಿಸಿತು. ಲೋಹಿಯಾ ಸಂಗಾತಿಗಳಾದ ಅಚ್ಯುತ್ ಪಟವರ್ಧನ್, ನರೇಂದ್ರದೇವ, ಜಯಪ್ರಕಾಶ್ ನಾರಾಯಣ್ ಬಂಧನಕ್ಕೊಳಗಾದರು. ಆಗ ಗಾಂಧೀಜಿ ಬರೆದ ಮಾತು: ‘ಲೋಹಿಯಾ, ಜಯಪ್ರಕಾಶ್ ಬಂಧನದಲ್ಲಿರುವವರೆಗೂ ನನಗೆ ವಿಶ್ರಾಂತಿ ಎಂಬುದೇ ಇಲ್ಲ. ಈ ಇಬ್ಬರಿಗಿಂತ ಶುದ್ಧ ಹೃದಯದ, ಧೀರರಾದ ಇತರರನ್ನು ನಾನು ಕಂಡಿಲ್ಲ.’

ಆಗ ಲೋಹಿಯಾ ಬರ್ರೈಲಿ ಜೈಲಿನಲ್ಲಿದ್ದರು. ಲೋಹಿಯಾರ ಭೂಗತ ಚಟುವಟಿಕೆಯ ಕಾಲದ ಸಮಾಜವಾದಿ ಸಂಗಾತಿ ಪೂರ್ಣಿಮಾ ಬ್ಯಾನರ್ಜಿ ಲೋಹಿಯಾರನ್ನು ನೋಡಲು ಜೈಲಿಗೆ ಹೋದರು. ಲೋಹಿಯಾ ಅವತಾರ ಕಂಡು ಪೆಚ್ಚಾದರು. ಅನಂತರ, ಡೆಹ್ರಾಡೂನ್ ಜೈಲಿನಲ್ಲಿದ್ದ ನೆಹರುಗೆ ಬರೆದ ಪತ್ರದಲ್ಲಿ ‘ಲೋಹಿಯಾ ತಲೆ ಬೋಳಿಸಿಕೊಂಡಿದ್ದಾರೆ; ಗಡ್ಡ ಬಿಟ್ಟಿದ್ದಾರೆ. ವಿಚಿತ್ರವಾಗಿ ಕಾಣುತ್ತಿದ್ದಾರೆ’ ಎಂದು ಬಣ್ಣಿಸಿದ ಪೂರ್ಣಿಮಾ ಕಣ್ಣಿಗೆ ಲೋಹಿಯಾ ‘ಪ್ರಸನ್ನಚಿತ್ತ’ರಾಗಿ ಕೂಡ ಕಂಡಿದ್ದರು. ಅದು ಪೂರ್ಣಿಮಾ ದರ್ಶನದಿಂದ ಹುಟ್ಟಿದ ಪ್ರಸನ್ನತೆಯೂ ಆಗಿರಬಹುದು ಎಂದು ಅಂದಿನ ಲೋಹಿಯಾರನ್ನು ಬಲ್ಲವರು ಊಹಿಸಿರಬಹುದು! ಯಾಕೆಂದರೆ ಲೋಹಿಯಾ–ಪೂರ್ಣಿಮಾ ನಡುವೆ ಮೋಹ ತರಂಗಗಳು ಸುಳಿದಾಡುತ್ತಿದ್ದ ರಮ್ಯ ಸುದ್ದಿಯೂ ಆ ಕಾಲದಲ್ಲಿತ್ತು!

ಈ ನಡುವೆ ಮಹಾಯುದ್ಧ ಮುಂದುವರಿದಿತ್ತು. ಜಪಾನೀಯರು ಏಷ್ಯಾದ ಭೂಭಾಗಗಳನ್ನು ವಶಪಡಿಸಿಕೊಳ್ಳಲು ದಾಪುಗಾಲು ಹಾಕತೊಡಗಿದಾಗ ಬ್ರಿಟಿಷ್ ಸರ್ಕಾರ ಎಚ್ಚೆತ್ತುಕೊಂಡಿತು; ನೆಹರು,, ಲೋಹಿಯಾ, ಅಚ್ಯುತ್ ಪಟವರ್ಧನ್ ಮುಂತಾದ ನಾಯಕರನ್ನು ಬಿಡುಗಡೆ ಮಾಡಿತು. ಜಯಪ್ರಕಾಶ ನಾರಾಯಣರನ್ನು ಬಿಡುಗಡೆ ಮಾಡಲಿಲ್ಲ. ಭಾರತೀಯ ನಾಯಕರೊಂದಿಗೆ ಸಂಧಾನ ಮಾಡಿಕೊಳ್ಳಲು ಬ್ರಿಟಿಷ್ ಸರ್ಕಾರದ ಮಂತ್ರಿ ಸರ್ ಸ್ಟ್ಯಾಫರ್ಡ್ ಕ್ರಿಪ್ಸ್ ಭಾರತಕ್ಕೆ ಬಂದ. ಲೋಹಿಯಾ ‘ಮಿಸ್ಟರಿ ಆಫ್ ಸರ್ ಸ್ಟ್ಯಾಫರ್ಡ್ ಕ್ರಿಪ್ಸ್’ ಎಂಬ ಕಿರುಪುಸ್ತಕ ಬರೆದು ಅವನ ಭೇಟಿಯ ದುರುದ್ದೇಶವನ್ನು ಬಯಲು ಮಾಡಿದರು. ‘ಸ್ಟ್ಯಾಫರ್ಡ್ ಕ್ರಿಪ್ಸ್ ಆಡುತ್ತಿರುವ ಸಂಧಾನದ ಮಾತುಗಳು ಮುಳುಗುತ್ತಿರುವ ಬ್ಯಾಂಕಿನ ಪೋಸ್ಟ್‌ಡೇಟೆಡ್ ಚೆಕ್ಕುಗಳಂತಿವೆ!’ ಎಂದು ಗಾಂಧೀಜಿ ತಮಾಷೆ ಮಾಡಿದರು. ಕ್ರಿಪ್ಸ್ ಸಂಧಾನ ಬಿದ್ದು ಹೋಯಿತು.

27 ಜನವರಿ 1941. ಗೃಹಬಂಧನದಲ್ಲಿದ್ದ ಸುಭಾಷ್‌ಚಂದ್ರ ಬೋಸ್ ಅಲ್ಲಿಂದ ತಪ್ಪಿಸಿಕೊಂಡು ಆಫ್ಘಾನಿಸ್ಥಾನಕ್ಕೆ ನುಸುಳಿ, ನಂತರ ಜರ್ಮನಿ ತಲುಪಿದ್ದರು; ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ಹಿಟ್ಲರ್‌ನ ಬೆಂಬಲ ಪಡೆಯುವ ಪ್ರಯತ್ನ ಮುಂದುವರಿಸಿದ್ದರು. ಜೈಲಿನಲ್ಲಿದ್ದ ಜಯಪ್ರಕಾಶ ನಾರಾಯಣ ದೇವೋಲಿ ಜೈಲಿನಿಂದ ತಪ್ಪಿಸಿಕೊಳ್ಳಲು ಹೊರಟು ಸಿಕ್ಕುಬಿದ್ದರು.

ದೇಶದ ಉದ್ದಗಲಕ್ಕೂ ಸ್ವಾತಂತ್ರ್ಯದ ಹಂಬಲ ತೀವ್ರವಾಗುತ್ತಿತ್ತು. ಸ್ವಾತಂತ್ರ್ಯ ಚಳುವಳಿಗಾರರ ಸಹನೆಯ ಕಟ್ಟೆಯೊಡೆಯುತ್ತಿತ್ತು. 26 ಏಪ್ರಿಲ್ 1942ರ ‘ಹರಿಜನ್’ ಸಂಚಿಕೆಯಲ್ಲಿ ಗಾಂಧೀಜಿ ಬ್ರಿಟಿಷರು ಭಾರತ ಬಿಟ್ಟು ಹೊರಡಬೇಕೆಂದು ನೇರವಾಗಿ ಹೇಳಿದರು. ಬ್ರಿಟಿಷರ ವಿರುದ್ಧ ನಿರ್ಣಾಯಕ ಸಂಗ್ರಾಮ ಘೋಷಿಸಬೇಕು; ರಾಜಿ ಕಬೂಲಿ, ಸಣ್ಣ ಪುಟ್ಟ ರಿಯಾಯತಿಗಳ ಕಾಲಕ್ಕೆ ಕೊನೆ ಹೇಳಬೇಕು ಎಂದು ಗಾಂಧೀಜಿ ನಿರ್ಧರಿಸಿದರು.

‘ಪ್ರಜಾಪ್ರಭುತ್ವವಾದಿ ಶಕ್ತಿಗಳು ಹಾಗೂ ಫ್ಯಾಸಿಸ್ಟ್ ಶಕ್ತಿಗಳ ನಡುವಣ ಈ ಯುದ್ಧದ ಕಾಲದಲ್ಲಿ ಬೃಹತ್ ಜನಾಂದೋಲನ ಆರಂಭಿಸುವುದು ಬೇಡ’ ಎಂಬುದು ನೆಹರು, ಮೌಲಾನ, ರಾಜಾಜಿಯವರ ನಿಲುವಾಗಿತ್ತು. ಯಾರೂ ಬರದಿದ್ದರೆ ತಾವೊಬ್ಬರೇ ಚಳುವಳಿ ಹೂಡುವುದಾಗಿ ಗಾಂಧೀಜಿ ಹೇಳಿದರು; ಎಲ್ಲ ನಾಯಕರೂ ಗಾಂಧೀ ನಿರ್ಣಯದ ಪರ ನಿಲ್ಲಲೇಬೇಕಾಯಿತು. ಕಾಂಗ್ರೆಸ್ ಸಮಾಜವಾದಿಗಳು ಈ ಮೊದಲೇ ಗಾಂಧೀ ನಿರ್ಣಯದ ಪರವಾಗಿದ್ದರು.

ಬ್ರಿಟಿಷರ ವಿರುದ್ಧದ ಅಂತಿಮ ಸಂಗ್ರಾಮದ ಘೋಷಣೆ ಮಾಡಲು ತಕ್ಕ ನುಡಿಗಟ್ಟಿಗಾಗಿ ಗಾಂಧೀಜಿ ಹುಡುಕಾಡುತ್ತಿದ್ದರು. ಗೆಳೆಯನೊಬ್ಬನಿಗೆ ಬರೆದ ಪತ್ರದಲ್ಲಿ ‘ಕ್ವಿಟ್ ಇಂಡಿಯಾ’ ಘೋಷಣೆ ಗಾಂಧೀಜಿಯ ಮನಸ್ಸಿನಲ್ಲಿ ಅಸ್ಪಷ್ಟವಾಗಿ ರೂಪುಗೊಂಡಿತ್ತು. ಸ್ಟ್ಯಾಫರ್ಡ್ ಕ್ರಿಪ್ಸ್‌ನ ಸಂಧಾನವನ್ನು ತಿರಸ್ಕರಿಸಿದ ಮೇಲೆ ‘ಕ್ವಿಟ್ ಇಂಡಿಯಾ’ ಘೋಷಣೆಯ ಶಕ್ತಿಯ ಬಗ್ಗೆ ಗಾಂಧೀಜಿಯ ನಂಬಿಕೆ ಗಟ್ಟಿಯಾಯಿತು.

1929ರಲ್ಲಿ ‘ಸೈಮನ್, ಗೋ ಬ್ಯಾಕ್’ ಘೋಷಣೆ ರೂಪಿಸಿದ್ದ ಮುಂಬೈನ ಕಮ್ಯುನಿಸ್ಟ್ ಯೂಸುಫ್ ಮೆಹರಾಲಿ ಈಗ ತರುಣ ಸಮಾಜವಾದಿಯಾಗಿದ್ದರು; ಇಂಗ್ಲಿಷ್ ಸಾಹಿತ್ಯದ ಒಳ್ಳೆಯ ಓದುಗರಾಗಿದ್ದ ಯೂಸುಫ್ ಮೆಹರಾಲಿಗೆ ಇಂಗ್ಲಿಷ್ ಕವಿ ಆಲ್ಫ್ರೆಡ್ ಟೆನ್ನಿಸನ್‌ನ ‘ದ ಛಾರ್ಜ್ ಆಫ್ ದ ಲೈಟ್ ಬ್ರಿಗೇಡ್’ ಪದ್ಯದ ಸಾಲುಗಳು ನೆನಪಾದವು:

**Theirs is not to reason why**
**Theirs but to do and die**

ಟೆನ್ನಿಸನ್ ಪದ್ಯದ ಸಾಲುಗಳ ಸಂದರ್ಭ, ಅರ್ಥ ಬೇರೆ; ಆದರೆ ಅಲ್ಲಿದ್ದ ಡೂ ಅಂಡ್ ಡೈ ಪದಜೋಡಿಯನ್ನು ಮೆಹರಾಲಿ ಪಲ್ಲಟಗೊಳಿಸಿ, ‘ಡೂ ಆರ್ ಡೈ’ಎಂಬ ಘೋಷವಾಕ್ಯ ರೂಪಿಸಿದರು! ಅದರ ಹಿಂದಿ ಅನುವಾದ: ‘ಕರೋ ಯಾ ಮರೋ’! ಈ ಘೋಷವಾಕ್ಯ ಕೇಳಿ ಗಾಂಧೀಜಿ ರೋಮಾಂಚನಗೊಂಡರು.

ಆಗಸ್ಟ್ 7, 1942. ಮುಂಬೈನ ಗೋವಾಲಿಯಾ ಕೆರೆ ಮೈದಾನದಲ್ಲಿ ಸಾವಿರಾರು ಭಾರತೀಯರ ದೇಶಭಕ್ತಿಯ ಹುರುಪು, ಉದ್ವೇಗ, ತೀವ್ರ ನಿರೀಕ್ಷೆಗಳ ವಾತಾವರಣ. ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಎರಡು ದಿನದ ಚಾರಿತ್ರಿಕ ಅಧಿವೇಶನ ಶುರುವಾಯಿತು. ‘ಕ್ವಿಟ್ ಇಂಡಿಯಾ’ ನಿರ್ಣಯವನ್ನು ಅನುಮೋದಿಸುತ್ತಾ ಸರ್ದಾರ್ ಪಟೇಲ್ ಹೇಳಿದರು: ‘ನಮ್ಮ ಈಗಿನ ಗುರಿ– ಜಪಾನೀಯರು ನಮ್ಮ ಮೇಲೆ ಆಕ್ರಮಣಕ್ಕೆ ಬರುವ ಮೊದಲೇ ಭಾರತವನ್ನು ಸ್ವತಂತ್ರಗೊಳಿಸುವುದು; ಅವರು ಅಕಸ್ಮಾತ್ ಆಕ್ರಮಣ ಮಾಡಲು ಬಂದರೆ ಅವರನ್ನು ಹಿಮ್ಮೆಟ್ಟಿಸಲು ಸಿದ್ಧರಾಗಿರುವುದು.’

ಅಂದೇ ಗಾಂಧೀಜಿ ‘ಕ್ವಿಟ್ ಇಂಡಿಯಾ’ ಕರೆಯನ್ನು ಘೋಷಿಸಿದರು. ಮಾರನೆಯ ದಿನ, ಆಗಸ್ಟ್ 8ರಂದು, ಗಾಂಧೀಜಿ ಸ್ವಾತಂತ್ರ್ಯ ಘೋಷಣೆಯನ್ನೇ ಮಾಡಿಬಿಟ್ಟರು: ‘ಈ ಗಳಿಗೆಯಿಂದ ಪ್ರತಿಯೊಬ್ಬರೂ,